International Journal of Research in Economics and Social Sciences(IJRESS)
Available online at: http://euroasiapub.org
Vol. 11 Issue 04, April- 2021
ISSN: 2249-7382 | Impact Factor: 8.018|
(An open access scholarly, peer-reviewed, interdisciplinary, monthly, and fully refereed journal.)

# ಮರೆಯಲಾಗದ ಮಹಾಸಾಧಕರು
# ಲೋಹಿಯಾ-ಜೆಪಿ

ಡಾ. ಮಾದಯ್ಯ ಮಾಕನಹಳ್ಳಿ
ಕನ್ನಡ ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕೆ.ಆರ್. ನಗರ

1. ಅಪ್ಪಟ ದೇಶಪ್ರೇಮಿ ಲೋಹಿಯಾ

ಭಾರತ ಕಂಡ ಚಿಂತನಾಶೀಲ, ವಿಚಾರವಂತ ಅಗ್ರಮಾನ್ಯ ನಾಯಕರುಗಳಲ್ಲಿ ಡಾ. ರಾಮಮನೋಹರ ಲೋಹಿಯಾ ಅವರದೊಂದು ಅವಿಸ್ಮರಣೀಯವಾದ ಹೆಸರು. ಮೂಲತಃ ಸ್ವಲ್ಪ ಸಿಡುಕು ಸ್ವಭಾವದವರಾಗಿದ್ದ ಅವರು ತಮ್ಮ ಸೂಕ್ಷ್ಮ ದೃಷ್ಟಿಯ ಹರಿತ ಚಿಂತನೆಗಳ ಮೂಲಕ ಭಾರತೀಯ ಸಮಾಜಕ್ಕೊಂದು ಹೊಸ ದಿಕ್ಕನ್ನು ತೋರಿಸಿದವರು.

ಭಾರತೀಯ ಸಮಾಜದಲ್ಲಿ ತಮ್ಮ ವಿವೇಕಪೂರ್ಣ ಚಿಂತನೆಗಳ ಮೂಲಕ ವಿಶಿಷ್ಟ ಛಾಪನ್ನು ಮೂಡಿಸಿದ ಡಾ. ರಾಮಮನೋಹರ ಲೋಹಿಯಾ ಅವರ ವಿಚಾರ ಚಿಂತನೆಗಳಿಗೆ ಇಂದಿಗೂ ಸಹ ಒಂದು ಮೌಲಿಕವಾದ ಸ್ಥಾನವಿದೆ. ಅವರೊಬ್ಬ ಅಪ್ಪಟ ಸಮಾಜವಾದೀ ಚಿಂತಕ.

ಉತ್ತರ ಪ್ರದೇಶ ರಾಜ್ಯದ ಫೈಜಪುರ ಜಿಲ್ಲೆಯಲ್ಲಿ 'ಅಕ್ಬರ್‌ಪುರ' ಎಂಬುದು ಒಂದು ಹಳ್ಳಿ. ಈ ಊರಿನಲ್ಲಿ ತಮ್ಮ ಹಿರಿಯ ತಲೆಮಾರಿನವರು ಮಾಡುತ್ತಿದ್ದ, ಕಬ್ಬಿಣದ ವ್ಯಾಪಾರವನ್ನು ಮುಂದುವರಿಸಿಕೊಂಡು ಜೀವನವನ್ನು ಸಾಗಿಸುತ್ತಿದ್ದ ಹೀರಲಾಲ್ ಮತ್ತು ಚಂದ್ರಿ ಎಂಬ ದಂಪತಿಗಳ ಕುಟುಂಬವು ವಾಸವಾಗಿದ್ದಿತು. ಇವರಿಗೆ ಮಾರ್ಚ್, 23, 1910ರಂದು ಒಂದು ಗಂಡು ಮಗು ಜನಿಸಿತು. ಆ ಮಗುವಿಗೆ ಈ ದಂಪತಿಗಳು ಪ್ರೀತಿಯಿಂದ ಇಟ್ಟ ಹೆಸರೆ ಲೋಹಿಯಾ1 ಎಂದು. ಈ ಮಗು ಸ್ವಲ್ಪ ಬೆಳೆದು ಎರಡು ವರ್ಷಗಳು ತುಂಬವ ಹೊತ್ತಿಗಾಗಲೇ ತನ್ನ ತಾಯಿಯನ್ನು ಕಳೆದುಕೊಂಡಿತು. ಮುಂದೆ ಲೋಹಿಯಾ ಅವರು ತಾಯ್ತನದ ಪ್ರೀತಿಯನ್ನು, ತಂದೆಯಾದ ಹೀರಲಾಲ್ ಅವರಲ್ಲಿ ಕಾಣುತ್ತ, ವಿದ್ಯಾಭ್ಯಾಸವನ್ನು ಮಾಡಿದರಷ್ಟೇ ಅಲ್ಲದೆ, ಭಾರತದ ಇತಿಹಾಸದಲ್ಲಿ ಉನ್ನತವಾದುದನ್ನು ಸಾಧಿಸಿಯೂ ಸಹ ತೋರಿಸಿದರು.

ಡಾ.ರಾಮಮನೋಹರ ಲೋಹಿಯಾ ಅವರು ಚಿಕ್ಕಂದಿನಲ್ಲಿಯೇ, ಅಂದು ಗಾ0ಧೀಜಿಯವರು ಪ್ರತಿಪಾದಿಸುತ್ತಿದ್ದ ಆದರ್ಶ ವಿಧಾನಗಳಿಗೆ, ತೀವ್ರ ಚಿಂತನೆಗಳಿಗೆ ಒಳಗಾದವರು. ಹರಿತ ಮನಸ್ಸಿನ ಸಂವೇದನಾಶೀಲ ವ್ಯಕ್ತಿತ್ವದವರಾಗಿದ್ದ ಅವರು

ಸಮಾಜವಾದಿ ಚಿಂತಕರಾಗಿ ತಮ್ಮ ಮನದಾಳದಲ್ಲಿ ಅಂತರ್ಗತವಾಗಿದ್ದ ಚಿಂತನೆಗಳನ್ನು ಅಭಿವ್ಯಕ್ತಿಸುತ್ತಿದ್ದರು. ಬ್ರಿಟಿಷ್ ಸರ್ಕಾರವು, ಭಾರತವನ್ನು ಅಧೀನದಲ್ಲಿಟ್ಟುಕೊಂಡು ಆಳ್ವಿಕೆ ನಡೆಸುತ್ತಿದ್ದ ಆ ಪ್ರತಿಕೂಲ ಪರಿಸ್ಥಿತಿಯಲ್ಲಿ, ಉನ್ನತ ಶಿಕ್ಷಣವನ್ನು ಮಾಡಬೇಕೆಂಬ ಮಹದಾಸೆಯನ್ನು ಲೋಹಿಯಾ ಹೊಂದಿದ್ದರು. ಇದು ಶಿಕ್ಷಣದ ಮಹತ್ವದ ಬಗ್ಗೆ ಲೋಹಿಯಾ ಅವರಿಗೆ ಎಷ್ಟೊಂದು ಅರಿವಿದ್ದಿತು ಎಂಬ ಅಂಶವನ್ನು ತೋರಿಸುತ್ತದೆ. ಆ ಕಾರಣಕ್ಕಾಗಿ ಅವರು, ಕಲ್ಕತ್ತಾ ನಗರದ ವಿದ್ಯಾಸಾಗರ ಕಾಲೇಜನ್ನು ಸೇರಿ 1929ರಲ್ಲಿ ಬಿ.ಎ. ಪದವಿ ಪಡೆಯುವುದು ಅಷ್ಟು ಸುಲಭದ ಮಾತಾಗಿರಲಿಲ್ಲ. ಇಷ್ಟಕ್ಕೆ ಮಾತ್ರ ತೃಪ್ತರಾಗದೆ ಇನ್ನೂ ಉನ್ನತ ವಿದ್ಯಾಭ್ಯಾಸವನ್ನು ಮಾಡಲೇಬೇಕೆಂಬ ಛಲದಿಂದ ಪದವಿ ಪಡೆದ ವರ್ಷವೆ ಲೋಹಿಯಾ ಅವರು ಇಂಗ್ಲೆಂಡಿಗೆ ತೆರಳಿದರು. ಅವರಿಗೆ ಅಲ್ಲಿ ಪ್ರತಿಕೂಲ ಪರಿಸ್ಥಿತಿ ಕಾದಿತ್ತು. ಈ ನಡುವೆ ಭಾರತದಲ್ಲಿ ಸ್ವಾತಂತ್ರ್ಯ ಚಳವಳಿಯ ಕಾವು ವ್ಯಾಪಕವಾಗಿ ಹರಡುತ್ತಿತ್ತು. ಭಾರತೀಯರಲ್ಲಿ ಅಲ್ಲಲ್ಲೆ ರಾಷ್ಟ್ರ ಪ್ರೇಮದ ಅರಿವು ಚಿಗುರುತ್ತಿತ್ತು ಆದರೆ ಅಂದಿನ ಸಮಯದಲ್ಲಿ ಇಂಗ್ಲೆಂಡಿನಲ್ಲಿ ಎದುರಾದ ಅನಾನುಕೂಲದ ಪರಿಸ್ಥಿತಿಯನ್ನು ಎದುರಿಸಿದ ಲೋಹಿಯಾ ಅವರು, ಜರ್ಮನಿ ದೇಶಕ್ಕೆ ಹೋಗಿ ಅಲ್ಲಿಯ ಬರ್ಲಿನ್ ವಿಶ್ವವಿದ್ಯಾನಿಲಯವನ್ನು ಸೇರಿದರು. ಆ ವಿಶ್ವವಿದ್ಯಾನಿಲಯದಲ್ಲಿ ಪಿಎಚ್.ಡಿ. ಪದವಿಗಾಗಿ "ಉಪ್ಪು ಸತ್ಯಾಗ್ರಹ" ಎಂಬ ವಿಷಯದ ಮೇಲೆ ಸಂಶೋಧನೆಯನ್ನು ಕೈಗೊಂಡು ಅಧ್ಯಯನ ಮಾಡುವುದರ ಮೂಲಕ ಅರ್ಥಶಾಸ್ತ್ರದಲ್ಲಿ "ಡಾಕ್ಟರೇಟ್" ಪದವಿಯನ್ನು ಪಡೆದರು. ಅವರ ಈ ಸಂಶೋಧನಾ ವಿಷಯದ ಆಯ್ಕೆಯೇ ಅವರಲ್ಲಿದ್ದ ಚಿಂತನೆ ಹಾಗೂ ಅಭಿರುಚಿಯನ್ನು ತೋರಿಸುತ್ತದೆ. ರಾಮಮನೋಹರ ಲೋಹಿಯಾ ಅವರು ಉನ್ನತ ಶಿಕ್ಷಣವನ್ನು ಮುಗಿಸಿಕೊಂಡು 1933ರಲ್ಲಿ ಭಾರತಕ್ಕೆ ಬಂದಾಗ ಲೋಹಿಯಾ ಅವರ ತಂದೆಯವರಾದ ಹೀರಲಾಲ್ ಅವರು, ಸ್ವಾತಂತ್ರ್ಯ ಚಳವಳಿಯ ಹಿನ್ನೆಲೆಯಲ್ಲಿ ಕಾರಾಗೃಹವಾಸವನ್ನು ಸೇರಿದ್ದರು. ಈ ಬಗೆಯ ಎಲ್ಲಾ ಹೊಯ್ದಾಟಗಳು, ಚಳವಳಿಗಳು ಲೋಹಿಯಾ ಅವರ ಚಿಂತನೆಯ ಸ್ವರೂಪವನ್ನು ಬದಲಿಸಿದವು ಎಂಬುವಂಥದ್ದು ಸತ್ಯ ಸಂಗತಿಯಾಗಿದೆ.

ದಟ್ಟ ಮನುಷ್ಯ ಪ್ರೀತಿಯ ಅಪ್ಪಟ ಸಾಮಾಜಿಕ ಚಿಂತಕರಾಗಿದ್ದ ಲೋಹಿಯಾ ಅವರು ಜರ್ಮನಿಯಲ್ಲಿ ಸಂಶೋಧನೆ ಮಾಡುತ್ತಿದ್ದಾಗ ಕಾರ್ಲ್ ಮಾರ್ಕ್ಸ್‌ನ 'ಸಮಾಜವಾದಿ' ವಿಚಾರಧಾರೆಗಳಿಂದ ಸಾಕಷ್ಟು ಪ್ರಭಾವಗೊಂಡಿದ್ದರು. ಭಾರತಕ್ಕೆ ಅವರು ಮರಳಿದ ನಂತರ ಬ್ರಿಟಿಷ್ ಸರ್ಕಾರದ ಕಾನೂನು ಬಾಹಿರ ನೀತಿನಿಯಮಗಳು ರೀತಿನೀತಿಗಳು ಲೋಹಿಯಾ ಅವರು ತಮ್ಮ ಜೀವನದಲ್ಲಿ ಜನಪರವಾಗಿ ಹೋರಾಟ ಮಾಡಲು ಪ್ರೇರಣೆ ಆದವು. ಉನ್ನತ ಶಿಕ್ಷಣವನ್ನು ಪಡೆದಿದ್ದ ಲೋಹಿಯಾ ಅವರು ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಬಗ್ಗೆ ಅಪಾರ

ನಂಬಿಕೆಯನ್ನಿಟ್ಟುಕೊಂಡು ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿ ದುಡಿಯುತ್ತಾರೆ; ಅಪಾರ ಜೀವನಾನುಭವಗಳನ್ನು ಮೈಗೂಡಿಸಿಕೊಂಡಿದ್ದರು ಹಾಗೂ ಅವರು ಮಾತು ಮಾತಿಗೂ ಇಂಗ್ಲಿಷರು ಭಾರತ ಬಿಟ್ಟು ಹೋಗಬೇಕೆಂದು ಪ್ರತಿಪಾದಿಸಿದರು. ಗಾಂಧೀಜಿಯವರಿಗೆ ಅತಿ ನಿಕಟವರ್ತಿಯಾಗಿದ್ದ ಅವರು ಕೆಲವೊಂದು ಸಲ ಅವರ ತತ್ವ ಸಿದ್ಧಾಂತಗಳನ್ನು ಒಪ್ಪಿಕೊಂಡಿದ್ದಾಗ್ಯೂ ಸಹ, ಗಾಂಧೀಜಿಯವರ ಆದರ್ಶಗಳಿಗೆ ಎಷ್ಟು ಮಹತ್ವದ ನ್ಯಾಯ ಸಿಗುತ್ತದೆ ಎಂಬ ಅನುಮಾನವನ್ನು ವ್ಯಕ್ತಪಡಿಸುತ್ತಿದ್ದರು. ಹಾಗೆಯೇ ಗಾಂಧೀಜಿಯವರ ಪ್ರಭಾವಿಸಬಲ್ಲ ಸೂಕ್ಷ್ಮ ಶಕ್ತಿಯನ್ನು ಹೊಂದಿದವರಾಗಿದ್ದರು ಎಂಬುವುದು ತುಂಬ ಮಹತ್ವದ ಸಂಗತಿ ಆಗಿದೆ. ನಿಷ್ಠುರ ವ್ಯಕ್ತಿಯಾಗಿದ್ದ ಲೋಹಿಯಾ ಅವರು ಕಾಂಗ್ರೆಸ್ ಪಕ್ಷದ ಕೆಲವು ನೀತಿನಿಯಮಗಳನ್ನು ನೇರವಾಗಿಯ ಖಂಡಿಸುತ್ತಿದ್ದರು. ಅಂತಹ ಸಂದರ್ಭದಲ್ಲಿ ಗಾಂಧೀಜಿಯವರು ಲೋಹಿಯಾ ಅವರ ಮನೋಸ್ಥಿತಿಯನ್ನು ಹೇಗೆ ಬದಲಾಯಿಸುತ್ತಿದ್ದರು ಎಂಬುದಕ್ಕೆ ನಿದರ್ಶನವಾಗಿ "ಗಾಂಧೀಜಿಯವರು ಲೋಹಿಯಾ ಅವರನ್ನು ಮಗನಂತೆ, ಮಿತ್ರನಂತೆ, ಶಿಷ್ಯನಂತೆ ಕಂಡು, ಅವರ ಮನಸ್ಸಿಗೆ ನೋವಾಗದ ರೀತಿಯಲ್ಲಿ ತಿದ್ದುತ್ತಿದ್ದರು. ಯಾರು ಯಾರನ್ನು ಹೇಗೆ ತಿದ್ದಬೇಕು, ಯಾರಿಗೆ ಯಾವ ಅಸ್ತ್ರ ಸರಿ ಎಂಬುದನ್ನು ಕೇವಲ ಒಳದನಿಯಿಂದಲೇ ಅರಿಯುತ್ತಿದ್ದ ಮಹಾಮನೋಶಾಸ್ತ್ರಜ್ಞ ಗಾಂಧೀಜಿ; ನಿಮ್ಮ ತಂದೆ ನನ್ನ ಅಂಧ ಅನುಯಾಯಿಯಾಗಿದ್ದರು. ನೀನು ಜಗಳಗಂಟಿಯಾದದ್ದು ಹೇಗೆ"2 ಎನ್ನುತ್ತಿದ್ದರಂತೆ.

ಭಾರತದ ಪಗತಿಯ ಬಗ್ಗೆ ಉಜ್ವಲ ಮಹಾಕನಸನ್ನೆ ಕಟ್ಟಿಕೊಂಡಿದ್ದ ಅನೇಕ ಮಹನೀಯರುಗಳಲ್ಲಿ ಲೋಹಿಯಾ ಅವರು ಒಬ್ಬರು. ಬ್ರಿಟಿಷರನ್ನು ಭಾರತದಿಂದ ಓಡಿಸಿದ ಮೇಲೆ, ನಮಗೆ ನಿಜವಾದ ನ್ಯಾಯ ದೊರಕುತ್ತದೆ ಎಂಬ ಆಶಾವಾದವನ್ನು ಅವರು ಹೊಂದಿದ್ದವರಾಗಿದ್ದರು. 1942ರ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ ರಾಷ್ಟ್ರಪ್ರೇಮಿಗಳನ್ನು ತಮ್ಮ ಚಿಂತನೆ ಭಾಷಣಗಳ ಮೂಲಕ ಹುರಿದುಂಬಿಸಿ, ಬ್ರಿಟಿಷ್ ಸರ್ಕಾರಕ್ಕೆ ತಲೆನೋವಾಗಿದ್ದರು. ಅಲ್ಲದೆ ಪೊಲೀಸ್ ಪಡೆ ಲೋಹಿಯಾ ಅವರನ್ನು ಹಿಡಿಯಲು ಯತ್ನಿಸುತ್ತಿದ್ದ ಸಂದರ್ಭದಲ್ಲಿ ಅವರಿಗೆ ಚಳ್ಳೆ ಹಣ್ಣು ತಿನ್ನಿಸಲು ತಲೆ ಮರೆಸಿಕೊಂಡು ಸುಮಾರು ಎರಡು ವರ್ಷಗಳ ತನಕವೂ ಭೂಗತ ದೊರೆಯಂತೆ ನೆರೆಹೊರೆಯ ನೇಪಾಳ, ಅಸ್ಸಾಂ ಪ್ರದೇಶಗಳಲ್ಲಿ ಇರುತ್ತಿದ್ದರು. ಈ ರೀತಿಯ ನಾಟಕೀಯ ಛಲಗಾರಿಕೆಯ ಹೋರಾಟ ಒಬ್ಬ ರಾಷ್ಟ್ರಯೋಧ, ಸಾಮಾಜಿಕ ಚಿಂತಕನಿಗಲ್ಲದೆ, ಬೂಟಾಟಿಕೆಯ ವ್ಯಕ್ತಿಗಳಿಂದ ಸಾಧ್ಯವಿಲ್ಲ ಎಂಬುದನ್ನು ಸಾಬೀತು ಪಡಿಸಿದರು. ಈ ಹೊತ್ತಿಗಾಗಲೇ ಭಾರತೀಯ ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಬಹಳಷ್ಟು ಬದಲಾವಣೆಗಳು ಕಂಡುಬರುತ್ತಿದ್ದವು. ಜೊತೆಗೆ ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲಿ ಆಗಾಗ್ಗೆ ಒಳಜಗಳಗಳು ಸಂಭವಿಸುತ್ತಿದ್ದವು. ಈ ಎಲ್ಲಾ

International Journal of Research in Economics and Social Sciences(IJRESS)
Available online at: http://euroasiapub.org
Vol. 11 Issue 04, April- 2021
ISSN: 2249-7382 | Impact Factor: 8.018|
(An open access scholarly, peer-reviewed, interdisciplinary, monthly, and fully refereed journal.)

ಬೆಳವಣಿಗೆಯ ಹಿನ್ನೆಲೆಯಲ್ಲಿ ಅಖಂಡ ಭಾರತ ಒಡೆದು ಎರಡು ಹೋಳಾಗಿ ರೂಪುಗೊಂಡಿತ್ತಷ್ಟೆ ಅಲ್ಲದೆ; ಹಿಂದೂ, ಮುಸ್ಲಿಂ ಬಾಂಧವರ ನಡುವೆ ಕೋಮುಗಲಭೆ ನಡೆದದ್ದು ಅತ್ಯಂತ ಅಮಾನವೀಯವಾದ ಸಂಗತಿ ಎನ್ನಬಹುದು. ಈ ಸಂದರ್ಭದಲ್ಲಿ ಸಮಾಜವಾದವನ್ನು ಪ್ರತಿಪಾದಿಸುತ್ತಲೆ ಮೇಲೇರುತ್ತಿದ್ದ, ಡಾ. ರಾಮಮನೋಹರ ಲೋಹಿಯಾ ಅವರು ಜನಪರವಾಗಿ ಹೋರಾಟ ಮಾಡುತ್ತಿದ್ದುದು ಅವರಲ್ಲಿ ಸಾಮಾಜಿಕ ಕಳಕಳಿಯನ್ನು ಎತ್ತಿ ತೋರಿಸುತ್ತದೆ. ಅವರ ಈ ದೂರದೃಷ್ಟಿತ್ವದ ಚಿಂತನೆಗಳಿಗೆ ತೀವ್ರ ಸಂವೇದನೆಯನ್ನು ಅಭಿವ್ಯಕ್ತಿಸುತ್ತಿದ್ದವರು ಗಾಂಧೀಜಿ. ಇವರನ್ನು ಆತ್ಮೀಯತೆಯಿಂದ ನೋಡುತ್ತಲೆ ಮಾತನಾಡುತ್ತಲೆ ದೇವರನ್ನು ಕಾಣುತ್ತಿದ್ದ ಲೋಹಿಯಾ ಅವರು, ಆ ದೇವರು (ಗಾಂಧೀಜಿ) ಇಹಲೋಕವನ್ನು ತ್ಯಜಿಸಿದಾಗ ಗಾಂಧೀಜಿಯವರ ಸುಟ್ಟ ಭಸ್ಮ ಹಿಡಿದುಕೊಂಡು ದೂರದಲ್ಲಿದ್ದ ಒಬ್ಬ ರೈತನನ್ನು ನೋಡುತ್ತಾರೆ. ಆಗ ಲೋಹಿಯಾ ಅವರು “ಈ ದಿನ ಅವನು ಅನಾಥನಾದ. ಈ ನಾಡು ತಬ್ಬಲಿಯಾಯಿತು” ಎಂದಿರುವ ಲೋಹಿಯಾ ಬಡವರ ರೈತರ ದೀನದಲಿತರ ಬಗ್ಗೆ ಎಷ್ಟೊಂದು ಗಾಢ ಸ್ವರೂಪದ ಅನುಕಂಪ ಮಾನವೀಯ ಕಾಳಜಿ ಇದ್ದಿತ್ತೆಂಬುದನ್ನು ತಿಳಿಯಲು ಸಾಧ್ಯವಾಗುತ್ತದೆ.

ಗಾಂಧೀಜಿಯವರು ಸಾಯುವ ತನಕವೂ, ಲೋಹಿಯಾ ಅವರು ಕಾಂಗ್ರೆಸ್ ಪಕ್ಷದ ತತ್ವ, ಸಿದ್ಧಾಂತಗಳಿಗೆ ಕಟುಬದ್ಧರಾಗಿದ್ದರು. ಆದರೆ ಆ ಪಕ್ಷದ ಮೂಲ ಸಿದ್ಧಾಂತಗಳೆಲ್ಲವನ್ನೂ ಸಹ ಗಾಳಿಗೆ ತೂರಿ ಸ್ವಾರ್ಥ ಅಧಿಕಾರಲಾಲಸೆ ಮುಖ್ಯವೆಂದು ಭಾವಿಸಿದ್ದ, ಕೆಲವು ಕಾಂಗೆಸ್ ನಾಯಕರುಗಳ ಆಂತರಿಕ ಕಚ್ಚಾಟಗಳಿಂದ ಅವರು ಕಾಂಗ್ರೆಸ್ ಪಕ್ಷವನ್ನು ತ್ಯಜಿಸಿದರು. ಈ ನಿರ್ಧಾರ ಲೋಹಿಯಾ ಅವರಲ್ಲಿದ್ದ ನಿಷ್ಠುರ ವ್ಯಕ್ತಿತ್ವ ಮತ್ತು ನಿಸ್ವಾರ್ಥತೆಯನ್ನು ತೋರಿಸುತ್ತದೆ. ಲೋಹಿಯಾ ಅವರು 1952ರಲ್ಲಿ ಪ್ರಜಾ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿ, ಆ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ 1953ರಲ್ಲಿ ನೇಮಕಗೊಂಡರು. ಈ ಹೊತ್ತಿಗಾಗಲೆ ಬಹಳ ಪ್ರಬಲವಾಗಿ ಸಂಘಟಿತರಾಗಿದ್ದ ಸಮಾಜವಾದಿ ನಾಯಕರುಗಳು 1956ರಲ್ಲಿ ಹೈದರಾಬಾದಿನಲ್ಲಿ ಸಮಾಜವಾದಿ ಸಮ್ಮೇಳನವನ್ನು ನಡೆಸಿದರು. ಅನಂತರ ‘ಸಮಾಜವಾದಿ ಪಕ್ಷ' ಎಂಬುದನ್ನು ಹುಟ್ಟುಹಾಕಿದರು. ಡಾ. ರಾಮಮನೋಹರ ಲೋಹಿಯಾ ಅವರು ಅಧ್ಯಕ್ಷರಾದ ಮೇಲೆ ‘ಸಪ್ತ ವಾರ್ಷಿಕ ಯೋಜನೆ'ಯನ್ನು ಜಾರಿಗೆ ತಂದರು. ಆದರೆ ಈ ಸಂದರ್ಭದಲ್ಲಿ ಸಮಾಜವಾದ ಮತ್ತು ಪ್ರಜಾ ಸಮಾಜವಾದ ಎಂಬ ಎರಡು ಪಕ್ಷವನ್ನು ಜಯಪ್ರಕಾಶ ನಾರಾಯಣ ಅವರ ನೇತೃತ್ವದಲ್ಲಿ ವಿಲೀನಗೊಳಿಸುವ ಪ್ರಯತ್ನದಲ್ಲಿ ವಿಫಲವಾದರೂ ಸಹ ಮುಂದೆ ಅವು ಒಂದೆ ಪಕ್ಷವಾಗಿ ರೂಪುಗೊಂಡವು.

ಬಹುಮುಖ ವ್ಯಕ್ತಿತ್ವದ ಡಾ. ರಾಮಮನೋಹರ ಲೋಹಿಯಾ ಅವರು ತುಂಬು ಆತ್ಮೀಯ ಚೇತನವಾಗಿದ್ದರು. ಅವರು ಹಣ ಹಾಗೂ ವಯಕ್ತಿಕ ಬದುಕಿನಿಂದ ಬಹು ದೂರವಿದ್ದವರು. ಅಪಾರವಾದ ಜೀವನಾನುಭವವನ್ನು ಪಡೆದುಕೊಂಡ ನಂತರ, ಯಾವುದೇ ವಿಷಯವನ್ನು ಚರ್ಚಿಸುವ, ಒಳಹೊಕ್ಕಿ ನೋಡಿ ವಿಶ್ಲೇಷಿಸುವ ಮೂಲಕ ಒಂದು ಸ್ಪಷ್ಟ ತೀರ್ಮಾನಕ್ಕೆ ಬರುತ್ತಿದ್ದರು. ಇವರು ನೆಹರು ಕುಟುಂಬವನ್ನು ತಾತ್ವಿಕವಾಗಿ ದ್ವೇಷಿಸಿದಷ್ಟು ಬೇರೆ ಯಾರೂ ಸಹ ದ್ವೇಷಿಸಲಿಲ್ಲವೆಂದೆ ಹೇಳಬೇಕು. ಆ ಹಿನ್ನೆಲೆಯಲ್ಲಿ ದೂರದೃಷ್ಟಿಯ ರಾಜಕೀಯ ಚಿಂತಕರಾಗಿದ್ದ ಲೋಹಿಯಾ ಅವರು 1962ರಲ್ಲಿ ನಡೆದ ಭಾರತದ ಸಾರ್ವತ್ರಿಕ ಮಹಾಚುನಾವಣೆಯಲ್ಲಿ 'ಫೂಲ್‌ಪುರ' ಎಂಬ ಲೋಕಸಭಾ ಕ್ಷೇತ್ರದಿಂದ ಅಂದಿನ ಪ್ರಧಾನಿ ಜವಾಹರಲಾಲ್ ನೆಹರು ಅವರ ವಿರುದ್ಧ ಸ್ಪರ್ಧಿಸಿ ಸೋತರು. ಆದರೂ ಸಹ ಈ ಸ್ಪರ್ಧೆ ಲೋಹಿಯಾರ ವಿಶಿಷ್ಟ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ ಎನ್ನಬಹುದು. ಆದರೆ 1963ರಲ್ಲಿ ನಡೆದ ಉಪಚುನಾವಣೆಯಲ್ಲಿ 'ಫರೂಕಾಬಾದ್' ಎಂಬ ಕ್ಷೇತ್ರದಿಂದ ಸ್ಪರ್ಧಿಸಿ ಕಾಂಗ್ರೆಸ್ ಪಕ್ಷದ ಡಾ. ಕೇಸ್ಕರ್ ಎಂಬುವರನ್ನು ಅರ್ಧ ಲಕ್ಷಕ್ಕೂ ಹೆಚ್ಚಿನ ಮತಗಳಿಂದ ಸೋಲಿಸಿ ಲೋಕಸಭೆಗೆ ಆಯ್ಕೆಯಾದರು. ಡಾ. ಲೋಹಿಯಾ ಅವರ ಈ ಗೆಲುವು ಚಾರಿತ್ರಿಕವಾಗಿ ಮಹತ್ವವನ್ನು ಪಡೆದುಕೊಂಡಿದೆ. ಅಷ್ಟರಲ್ಲಿ ಲೋಕಸಭೆಗೆ ಆಯ್ಕೆಯಾದ ಅವರನ್ನು ಕೆಲವು ಹಿತೈಷಿಗಳು ಮೆಚ್ಚಿದರು. ಆದರೆ ಕೆಲವು ರಾಜಕಾರಣಿಗಳಿಗಂತೂ ಲೋಹಿಯಾ ಅವರ ಆಯ್ಕೆ ನುಂಗಲಾರದ ತುತ್ತಾಗಿ, ಲೋಕಸಭೆಯಲ್ಲಿ ಲೋಹಿಯಾ ಅವರು ಗದ್ದಲ ಎಬ್ಬಿಸುತ್ತಾರೆಂದು, ಅಪಪ್ರಚಾರ ಮಾಡಿದರು. ಆ ಬಗೆಯ ಪ್ರತಿರೋಧದ ಮಾತುಗಳನ್ನು ಗಮನಿಸಿದ ಲೋಹಿಯಾ ಅವರು "ನಾನು ನನ್ನ ಬದುಕಿನಲ್ಲಿ ಯಾವುದೆ ಗೊಂದಲ ಮತ್ತು ಅಸ್ತವ್ಯಸ್ತತೆಗಳನ್ನು ಉಂಟುಮಾಡಿಲ್ಲವೆಂದು ನಿಮಗೆ ಖಾತರಿ ನೀಡಬಲ್ಲೆ. ಅಂದ ಮೇಲೆ ಲೋಕಸಭೆಯಲ್ಲಿ ಹಾಗೆ ಮಾಡುವ ಉದ್ದೇಶ ನನಗೆ ಖಂಡಿತಾ ಇಲ್ಲ. ಆದರೆ ಜನತೆಯ ದುಃಖ ದುಮ್ಮಾನಗಳಿಗೆ ಆಶೋತ್ತರಗಳಿಗೆ ದನಿಗೂಡುವ ನನ್ನ ಹಕ್ಕಿಗೆ ಯಾರಾದರೂ ಅಡ್ಡಿ ಮಾಡಿದರೆ ಆಗ ಆ ಕಥೆಯೇ ಬೇರೆ"3 ಎಂದಿದ್ದಾರೆ. ಲೋಹಿಯಾ ಅವರ ತೀವ್ರ ಚಿಂತನೆಗಳ ಹಿನ್ನೆಲೆಯಲ್ಲಿ ಕಾರ್ಲ್‌ಮಾರ್ಕ್ಸ್‌ನ ವಿಚಾರಗಳ ದಟ್ಟಪ್ರಭಾವ ಇರುವುದನ್ನು ಗಮನಿಸಬಹುದಾಗಿದೆ. ಲೋಹಿಯಾ ಅವರು ಮಾಡುತ್ತಿದ್ದ ಹೋರಾಟಗಳೆಲ್ಲವು ಜನಪರವಾಗಿದ್ದವು. ಅವರೆಂದೂ ಸಂಕುಚಿತ ರಾಜಕಾರಣಿಯಾಗಿರಲಿಲ್ಲ. ಅಂತಹ ಉತ್ತಮ ಚಾರಿತ್ರ್ಯದ ಸಂಸದೀಯ ಪಟುವಾಗಿದ್ದ ಡಾ. ಲೋಹಿಯಾ ಅವರು ತಮ್ಮ ಮುತ್ಸದ್ದಿತನವನ್ನು ಲೋಕಸಭೆಯಲ್ಲಿ ಹೇಗೆ ಪ್ರದರ್ಶಿಸುತ್ತಿದ್ದರೆಂಬುದನ್ನು ಹೀಗೆ ಉಲ್ಲೇಖಿಸಲಾಗಿದೆ. "ಸಾಮಾನ್ಯ ಜನತೆಯ ಆಶೆ ಆಕಾಂಕ್ಷೆಗಳಿಗೆ ನಾಲಗೆಯಾಗಿ, ಅವರ ನೋವು ನರಳುಗಳನ್ನು ಯಥಾವತ್ತಾಗಿ ಸಂಸತ್ತಿನಲ್ಲಿ

ಪ್ರತಿನಿಧಿಸುತ್ತಿದ್ದ ಜನತಾ ಜನಾರ್ಧನರೆಂದರೆ ಲೋಹಿಯಾ ಒಬ್ಬರೆ. ಅಂಕಿ ಸಂಖ್ಯೆಗಳಿಲ್ಲದೆ ಸಾಕ್ಷಿ ಪುರಾವೆಗಳಿಲ್ಲದೆ ಅವರೆಂದೂ ಮಾತಾಡಿದವರಲ್ಲ"4 ಎನ್ನಲಾಗಿದೆ.

ಡಾ. ರಾಮಮನೋಹರ ಲೋಹಿಯಾ ಅವರು ನಮ್ಮ ಮನಸ್ಸಿನಲ್ಲಿ ಉಳಿದಿರುವುದು ರಾಜಕಾರಣಿಯಾಗಿ ಅಷ್ಟೇ ಅಲ್ಲ; ಅದಕ್ಕಿಂತಲೂ ಬಹುಮುಖ್ಯವಾಗಿ ಅವರು ಕಂಡುಬರುವುದು ಸಮಾಜವಾದಿ ಚಿಂತನೆಗಳನ್ನು ಪ್ರತಿಪಾದಿಸಿದ ನೇತಾರರಾಗಿ ಎಂಬುದು ಒಪ್ಪತಕ್ಕ ಸಂಗತಿಯೆ ಆಗಿದೆ. ಅವರು ಬಂಡವಾಳವಾದ ಮತ್ತು ಕಮ್ಯುನಿಸಂ ಎರಡು ಸಿದ್ಧಾಂತಗಳನ್ನು, ನಿರ್ದಾಕ್ಷಿಣ್ಯವಾಗಿಯೆ ತಿರಸ್ಕರಿಸಿದರು. ಆದರೆ ಈ ಎರಡು ಸಿದ್ಧಾಂತಗಳಲ್ಲಿ "ಆರ್ಥಿಕ ಗುರಿಯುಳ್ಳ ಸಮುದಾಯ"ದ ಕಲ್ಪನೆಯು ಪ್ರಧಾನವಾದದ್ದು ಎಂದು ಅರ್ಥೈಸಿದರು. ವರ್ಗ ವ್ಯವಸ್ಥೆಯಂತೆಯೆ ಜಾತಿ ವ್ಯವಸ್ಥೆಯೂ ಶೋಷಣೆಗೆ ಹಲವು ಅವಕಾಶಗಳನ್ನು ಸೃಷ್ಟಿಸಿದೆ ಎಂಬ ಅಂಶವನ್ನು ಲೋಹಿಯಾ ಅವರು ಮನದಟ್ಟು ಮಾಡಿಕೊಂಡರು.

ಡಾ. ರಾಮಮನೋಹರ ಲೋಹಿಯಾ ಅವರ ಪ್ರಕಾರ, ಸಮಾಜವಾದವೆಂದರೆ ಪ್ರಜಾಪ್ರಭುತ್ವದಲ್ಲಿ ಹಾಗೂ ವ್ಯಕ್ತಿ ಸ್ವಾತಂತ್ರ್ಯದಲ್ಲಿ ವಿಶ್ವಾಸ, ಸರ್ವಾಧಿಕಾರದ ನಿರಾಕರಣೆ, ಸರ್ವಸಮಾನತೆ, ಸಿದ್ಧಾಂತೀಕರಣಕ್ಕಿಂತ ಪ್ರಯೋಗಶೀಲತೆ, ಸರಳ ಜೀವನ ಮತ್ತು ಅಲ್ಪ ಪ್ರಮಾಣದ ಯಾಂತ್ರೀಕರಣ, ವಿಕೇಂದ್ರೀಕರಣ, ಸಹಕಾರ ಜೀವನ, ಗ್ರಾಮ ಸ್ವರಾಜ್ಯ ಉತ್ಪನ್ನ ಸಾಧನಗಳ ರಾಷ್ಟ್ರೀಕರಣ ಎಂದು ವಿಶ್ಲೇಷಿಸಿದ್ದಾರೆ. ಜಾತಿ ವಿನಾಶ ಚಳವಳಿಯನ್ನು ಹುಟ್ಟುಹಾಕಿದ ಡಾ. ರಾಮಮನೋಹರ ಲೋಹಿಯಾ ಅವರು ವಿಶ್ವದ, ವಿಶ್ವಮನಸ್ಸು ಎಂಬ ಎರಡು ದೂರದೃಷ್ಟಿತ್ವದ ಪರಿಕಲ್ಪನೆಯನ್ನು ಆಶಿಸಿದರು. ಸಹಪಂಕ್ತಿಭೋಜನ ಹಾಗೂ ಅಂತರ್ಜಾತಿ ವಿವಾಹಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದರು. ತಮ್ಮ ಕೊನೆಯ ಉಸಿರಿರುವತನಕವೂ ಸಹ ಸರಳ ಜೀವನ ಮಾಡಿ ಬಡವರ ಪರವಾಗಿ ಧ್ವನಿ ಎತ್ತುತ್ತಲೇ ಹೋರಾಡಿದರು. ಅಂತಹ ವಿಶಿಷ್ಟ ವ್ಯಕ್ತಿತ್ವದ ಲೋಹಿಯಾ ಅವರ ಬಗ್ಗೆ ಅವರ ನಿಕಟವರ್ತಿಗಳಲ್ಲಿ ಒಬ್ಬರಾದ ಮಧುಲಿಮಯೆ ಅವರು "ಡಾ. ರಾಮಮನೋಹರ ಲೋಹಿಯಾ ಅವರು ಒಬ್ಬ ಅಪ್ಪಟ ಚಿಂತಕ. ಅಸದೃಶ ನೇತಾರ. ಹಾಗೆಯೇ ಒಬ್ಬ ಬಂಡಾಯಗಾರ. ಆಧುನಿಕ ಭಾರತದ ನಿರ್ಮಾಣದಲ್ಲಿ ಅವರು ವಹಿಸಿದ ಪಾತ್ರ ಅತಿ ಮಹತ್ವದ್ದು. ಕೇವಲ ದಂತ ಗೋಪುರದ ತತ್ವಜ್ಞಾನಿ ಅವರಾಗಿರಲಿಲ್ಲ" ಎಂದಿರುವ ಅವರ ಈ ಅಭಿಪ್ರಾಯ ಅರ್ಥಪೂರ್ಣವಾದುದಾಗಿದೆ.

ಸಾಮಾಜಿಕ ಸಮಾನತೆಯ ಹರಿಕಾರರಾದ ಡಾ. ರಾಮಮನೋಹರ ಲೋಹಿಯಾ ಅವರು ನಮ್ಮ ಜನಮನದಲ್ಲಿ ನೆಲೆಸಿ, ಶಾಶ್ವತವಾಗುಳಿದಿರುವುದು ಅವರು ಪ್ರತಿಪಾದಿಸಿದ ವಿಚಾರ ಚಿಂತನೆಗಳಿಂದ ಬಿಟ್ಟುಹೋದ ಸಾಮಾಜಿಕ ಮೌಲ್ಯಗಳಿಂದ. ಪ್ರತಿ ಗಳಿಗೆಯಲ್ಲಿಯೂ ಸಹ

International Journal of Research in Economics and Social Sciences(IJRESS)
Available online at: http://euroasiapub.org
Vol. 11 Issue 04, April- 2021
ISSN: 2249-7382 | Impact Factor: 8.018|
(An open access scholarly, peer-reviewed, interdisciplinary, monthly, and fully refereed journal.)

ಸಮಾಜದ ಹಿತಚಿಂತಕನಾಗಿ ಆಲೋಚಿಸುತ್ತಿದ್ದ ಡಾ. ಲೋಹಿಯಾ ಅವರು ತಮ್ಮ ದೇಹದಲ್ಲಾಗಿದ್ದ 'ಪ್ರಾಸ್ಟೇಟ್' ಗ್ರಂಥಿಯ ಚಿಕಿತ್ಸೆಗೆಂದು ದೆಹಲಿಯ ವಿಲ್ಲಿಂಗ್‌ಡನ್ ಆಸ್ಪತ್ರೆಗೆ ಸೆಪ್ಟೆಂಬರ್ - 30, 1967 ರಲ್ಲಿ ಸೇರಿದರು. ಆದರೆ ಆ ಆಸ್ಪತ್ರೆಯಲ್ಲಿ ಡಾ. ಲೋಹಿಯಾ ಅವರಿಗೆ ಶಸ್ತ್ರ ಚಿಕಿತ್ಸೆಯನ್ನು ಮಾಡುವ ಅನಿವಾರ್ಯತೆ ಬಂದೊದಗಿತು. ಆದರೆ ಆ ಶಸ್ತ್ರ ಚಿಕಿತ್ಸೆ ಯಶಸ್ವಿಯಾಗದೆ ಡಾ. ರಾಮಮನೋಹರ ಲೋಹಿಯಾ ಅವರು ಅಕ್ಟೋಬರ್ 12, 1967ರಂದು ಕೊನೆಯುಸಿರೆಳೆದರು. ಆಗ ಡಾ. ರಾಮಮನೋಹರ ರೋಹಿಯಾರಿಗೆ ಐವತ್ತೇಳರ ಹರೆಯ. 2. ಭಾರತದ ಪ್ರಗತಿಯ ಕನಸುಗಾರ ಜೆಪಿ  ಭಾರತದ ರಾಜಕೀಯ ಕ್ಷೇತ್ರದಲ್ಲಿ 'ಜೆಪಿ' ಎಂದೇ ಹೆಸರಾಗಿರುವ ಜಯಪ್ರಕಾಶನಾರಾಯಣ ಅವರು ಬಿಹಾರ ರಾಜ್ಯದ ಉತ್ತರಖಲಿಯಾ ಜಿಲ್ಲೆಗೆ ಸೇರಿರುವ 'ಸಿತಾಬ್ದಿಯಾರವ' ಎಂಬ ಕುಗ್ರಾಮದವರು. ಅವರು ಈ ಪುಟ್ಟ ಗ್ರಾಮದಲ್ಲಿ ವಾಸವಾಗಿದ್ದ ಶರಸೂಬಾಬು ಹಾಗೂ ಪೂಲನ್‌ರಾಣಿದೇವಿ ಎಂಬ ದಂಪತಿಗಳಿಗೆ ಹುಟ್ಟಿದ ಐದು ಮಕ್ಕಳಲ್ಲಿ ನಾಲ್ಕನೆಯವರಾಗಿ ಅಕ್ಟೋಬರ್ 21, 1902ರಂದು ಜನಿಸಿದರು. ಬಾಲ್ಯದಲ್ಲಿ ಚುರುಕುತನವನ್ನು ಮೈಗೂಡಿಸಿಕೊಂಡಿದ್ದ ಜಯಪ್ರಕಾಶನಾರಾಯಣರು ಪ್ರಕೃತಿಯ, ಬಗ್ಗೆ ಅಪಾರ ಪ್ರೀತಿಯನ್ನಿಟ್ಟುಕೊಂಡಿದ್ದವರಾಗಿದ್ದರು. ಅಲ್ಲದೆ ಓದುವುದರಲ್ಲಿ ತೀವ್ರ ಆಸಕ್ತರಾಗಿದ್ದ ಅವರು ಉನ್ನತ ಶಿಕ್ಷಣವನ್ನು ಪಡೆಯಬೇಕೆಂಬ ಮಹತ್ವಾಕಾಂಕ್ಷೆಯನ್ನು ಹೊಂದಿದವರಾಗಿದ್ದರು. ಅದಕ್ಕಾಗಿ, ತಮಗೆ ಎಷ್ಟೇ ಅಡೆ-ತಡೆಗಳು ಎದುರಾದರೂ ಸಹ ಅಧೈರ್ಯ ಪಡದೆ ವಿದ್ಯಾಭ್ಯಾಸವನ್ನು ಮಾಡಬೇಕೆಂದು ನಿರ್ಧರಿಸಿದರು. ಜಯಪ್ರಕಾಶನಾರಾಯಣರು ತಮ್ಮ ವಿಚಾರ ಚಿಂತನೆ ಬಹುಮುಖ ಪ್ರತಿಭೆಗೆ ಸೂಕ್ತ ಅಕ್ಷರ ವಿವೇಕವೆ ವೇದಿಕೆಯಾಗಬಹುದೆಂಬ ಹಂಬಲದಿಂದ ತಮ್ಮ ಹೆಂಡತಿಯಾದ ಪ್ರಭಾವತಿದೇವಿ ಹಾಗೂ ತಂದೆತಾಯಿಗಳನ್ನು ಬಿಟ್ಟು ಅಕ್ಟೋಬರ್ 22, 1922ರಂದು ಅಮೆರಿಕಾ ದೇಶಕ್ಕೆ ಉನ್ನತ ವಿದ್ಯಾಭ್ಯಾಸಕ್ಕಾಗಿ ತೆರಳಿದರು.

ಸುಮಾರು ಏಳು ವರ್ಷಗಳ ಕಾಲ ನಿರಂತರವಾಗಿ ಅಧ್ಯಯನ ಮಾಡಿದರು. ಆ ಹೊತ್ತಿಗಾಗಲೆ ಯಾವುದೇ ವಿಷಯದ ಬಗ್ಗೆ ಗಂಭೀರವಾಗಿ ಚಿಂತಿಸುವ ಗ್ರಹಿಸುವ ವಿಶ್ಲೇಷಿಸುವ ವ್ಯಕ್ತಿಯಾಗಿದ್ದ ಅವರು ಕಾರ್ಲ್‌ಮಾರ್ಕ್ಸ್, ಲೆನಿನ್, ಎಂ.ಎನ್. ರಾಯ್ ಅವರುಗಳು ಪ್ರತಿಪಾದಿಸುತ್ತಿದ್ದ 'ಸೌಮ್ಯವಾದ'ದಿಂದ ಪ್ರಭಾವಗೊಂಡರು ಹಾಗೂ ಹೆಚ್ಚಿಸಿಕೊಂಡರು. ಅµÉ್ಟೀ ಅಲ್ಲದೆ ತಮ್ಮ ಜೀವನದಲ್ಲೊಂದು ಹೊಸ ದಿಕ್ಕನ್ನು ಕಂಡುಕೊಂಡದ್ದು ಜಯಪ್ರಕಾಶನಾರಾಯಣ ಅವರಲ್ಲಿದ್ದ ಒಂದು ವಿಶಿಷ್ಟ ಪ್ರತಿಭೆಯನ್ನು ಅರ್ಥೈಸುತ್ತದೆ. ಅವರು ಬಿ.ಎ. ಮತ್ತು ಎಂ.ಎ ಪದವಿಯನ್ನು ಕ್ರಮವಾಗಿ 1928 ಮತ್ತು 1929 ರಲ್ಲಿ ಪಡೆದರು. ಈ ಮಹತ್ತರವಾದ ಶೈಕ್ಷಣಿಕ ಬೆಳವಣಿಗೆ ಉತ್ಸಾಹಿ ತರುಣರಾದ ಜಯಪ್ರಕಾಶನಾರಾಯಣ

ಅವರ ಮೇಲೆ ತೀವ್ರ ಸ್ವರೂಪದ ಆಲೋಚನೆ ಬೆಳೆಯಲು ಕಾರಣವಾಯಿತು. ವಿದೇಶದಿಂದ ಉನ್ನತ ಶಿಕ್ಷಣ ಪದವಿ ಪಡೆದು ಪಾಶ್ಚಾತ್ಯ ವಿಚಾರಧಾರೆಗಳಿಂದ ಪ್ರಭಾವಗೊಂಡು 1929ರಲ್ಲಿ ಭಾರತಕ್ಕೆ ಮರಳಿದ ಜಯಪ್ರಕಾಶನಾರಾಯಣ ಅವರಿಗೆ ಗಾಂಧೀಜಿಯವರ ಆದರ್ಶ ತತ್ವಗಳು ಸಹಜವಾಗಿಯೆ ಆಕರ್ಷಿಸಿದ್ದು ಆಶ್ಚರ್ಯದ ಸಂಗತಿಯೇನೂ ಆಗಿರಲಿಲ್ಲ. 'ಜೆಪಿ' ಅವರು ವಿದೇಶದಿಂದ ಉನ್ನತ ಶಿಕ್ಷಣವನ್ನು ಮುಗಿಸಿ 1930ರಲ್ಲಿ ಭಾರತಕ್ಕೆ ವಾಪಸ್ಸಾದ ವೇಳೆಗಾಗಲೆ ಕಮ್ಯುನಿಸ್ಟರ ತೀವ್ರ ಸ್ವರೂಪದ ಕ್ರಾಂತಿಕಾರಿ ಚಿಂತನೆಗಳಿಂದ ಭಾರತೀಯರು ನಿಜವಾದ ಸಾಮಾಜಿಕ ನ್ಯಾಯವನ್ನು ಪಡೆಯಬಹುದೆಂದು ಭಾವಿಸಿದ್ದರು. ಆದರೆ ಅವರು ಭಾರತಕ್ಕೆ ಬಂದ ನಂತರ ಕಮ್ಯುನಿಸ್ಟ್ ಕ್ರಾಂತಿಗಿಂತ ಮಹಾತ್ಮ ಗಾಂಧೀಯವರ ವಿಶಿಷ್ಟ ವ್ಯಕ್ತಿತ್ವಕ್ಕೆ ಮಾರುಹೋಗಿ 1930 ರಲ್ಲಿ ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸಿದರು. ಗಾಂಧೀಜಿಯವರು ಪ್ರತಿಪಾದಿಸುತ್ತಿದ್ದ, ತಮಗೆ ಕೆಲವು ಒಗ್ಗದ ನಿಲುವುಗಳನ್ನು ಜಯಪ್ರಕಾಶನಾರಾಯಣರು ಸರಾಗವಾಗಿ ಟೀಕಿಸುತ್ತಿದ್ದರು. ಆ ಸಂದರ್ಭದಲ್ಲಿ 'ಜೆಪಿ' ಅವರ ಪ್ರಖರ ಪಾಂಡಿತ್ಯ, ಬುದ್ಧಿವಂತಿಕೆಯ ಬಗ್ಗೆ ಅಪಾರವಾದ ನಂಬಿಕೆಯನ್ನಿರಿಸಿಕೊಂಡಿದ್ದ ಗಾಂಧೀಜಿಯವರು, "ಜಯಪ್ರಕಾಶನಾರಾಯಣ ಅವರು ಧೀರರು, ಸಮರ್ಥರು, ನಾಡಿಗೆ ನಾನಾ ಕ್ಲೇಶಗಳನ್ನನುಭವಿಸಿದರು. ಅವರು ನನ್ನ ಸಂಗಾತಿಗಳಾಗಿರುವುದೇ ಒಂದು ಭಾಗ್ಯ. ನನ್ನ ದೃಷ್ಟಿಗನುಗುಣವಾಗಿ ಅವರನ್ನೋಲಿಸಿಕೊಳ್ಳಬೇಕೆಂಬುದೇ ನನ್ನ ಆಸೆ"5 ಎಂದಿದ್ದಾರೆ. ಮಹಾತ್ಮಗಾಂಧೀಜಿಯವರ ಈ ಅಭಿಪ್ರಾಯ ಜಯಪ್ರಕಾಶನಾರಾಯಣ ಅವರ ಒಟ್ಟು ಮುಖವನ್ನು ಪರಿಚಯಿಸುತ್ತದೆ. ಜಯಪ್ರಕಾಶನಾರಾಯಣ ಅವರು ಮಾನವೀಯ ಹೃದಯವುಳ್ಳ ವ್ಯಕ್ತಿ. ತಮ್ಮ ದಾಂಪತ್ಯ ಬದುಕಿನಲ್ಲಿ ಅನ್ಯೋನ್ಯವಾಗಿಯೆ ಬಾಳಿದವರು. ಇವರ ಎಲ್ಲ ಬಗೆಯ ಸಾಧನೆಯ ಹಿಂದೆ ಅವರ ಧರ್ಮಪತ್ನಿಯಾದ ಪ್ರಭಾವತಿ ದೇವಿಯವರು ತೋರಿದ ಪ್ರೀತಿ ಸಹಾಯ ಮಹತ್ವದ್ದು. ಮುಂದೆ 'ಜೆಪಿ' ದಂಪತಿಗಳು ರಾಮಕೃಷ್ಣ ಪರಮಹಂಸ ಮತ್ತು ಶಾರದಾ ದೇವಿಯವರ ದಟ್ಟ ಪ್ರಭಾವಕ್ಕೆ ಒಳಗಾದರಷ್ಟೇ ಅಲ್ಲದೆ; ಸಾಂಸಾರಿಕ ಬದುಕಿನಿಂದಲೂ ದೂರವಾಗಿ ಬ್ರಹ್ಮಚರ್ಯದ ದೀಕ್ಷೆ ಸ್ವೀಕರಿಸಿದರು. ಆದ್ದರಿಂದಲೇ 'ಜೆಪಿ' ಅವರದೊಂದು ಕೇವಲ ಆದರ್ಶ ಬದುಕಲ್ಲ. ಆದರ್ಶವನ್ನು ಕಣ್ಣೆದರಿಗಿಟ್ಟುಕೊಂಡು ಬದುಕಿಗೆ ಮಾದರಿಯಾದ ಸಂಬಂಧ ಎನ್ನಬಹುದು.

ಜಯಪ್ರಕಾಶನಾರಾಯಣ ಅವರ ಹೆಸರು ನಮ್ಮ ಮನದಾಳದಲ್ಲಿ ಮಹತ್ವ ಪಡೆಯುವುದು ಅವರೊಬ್ಬ ಸಮಾಜವಾದಿ ಎಂಬ ಕಾರಣದಿಂದಾಗಿ. ಆರಂಭದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಸಕ್ರಿಯ ಕಾರ್ಯಕರ್ತರಾಗಿ ದುಡಿಯುತ್ತಿದ್ದರು. "ದಸ್ತಗಿರಿ" ಆಗಿ ಅಪ್ರತಿಮ ಮಾತುಗಾರರು ವಿಚಾರವಂತರು ಆಗಿದ್ದ ಕಾರಣಕ್ಕಾಗಿ ಅನೇಕ ಸಲ 'ನಾಸಿಕ'ದ ಜೈಲು

International Journal of Research in Economics and Social Sciences(IJRESS)
Available online at: http://euroasiapub.org
Vol. 11 Issue 04, April- 2021
ISSN: 2249-7382 | Impact Factor: 8.018|
(An open access scholarly, peer-reviewed, interdisciplinary, monthly, and fully refereed journal.)

ಸೇರಿದ್ದರು. ಇಲ್ಲಿಂದಲೆ ಅಶೋಕ ಮೆಹ್ತಾ ಮತ್ತು ಲೋಹಿಯಾ ಅವರೊಡಗೂಡಿ ಸಮಾಜವಾದದ ಬಗ್ಗೆ ಚರ್ಚಿಸಿ 1934ರಲ್ಲಿ 'ಆಚಾರ್ಯನರೇಂದ್ರದೇವರ' ನೇತೃತ್ವದಲ್ಲಿ ಸಮಾಜವಾದಿ ಪಕ್ಷ ಸ್ಥಾಪಿಸಿದರು. 1939ರಲ್ಲಿ ಎರಡನೆಯ ಮಹಾಯುದ್ಧ ನಡೆಯುವ ಸೂಚನೆಯನ್ನು ಮನಗಂಡು ಆ ಸಂದರ್ಭದಲ್ಲಿ ಹಿಟ್ಲರ್‌ನ ನಾಜಿ ತತ್ವ ಸಿದ್ಧಾಂತವನ್ನು ಜಯಪ್ರಕಾಶ ನಾರಾಯಣರು ಕಟುವಾಗಿ ಟೀಕಿಸಿದರು. ಆಗಸ್ಟ 1942 ರ ಕ್ವಿಟ್ ಇಂಡಿಯಾ ಸ್ವಾತಂತ್ರ್ಯ ಚಳವಳಿಯಲ್ಲಿ ಎಷ್ಟು ಕಠಿಣ ಸಮಸ್ಯೆಗಳನ್ನು ಎದುರಿಸಿದರು ಎಂಬುದಕ್ಕೆ ನಿದರ್ಶನವಾಗಿ 'ಹಜಾರಿಬಾಗ್' ಜೈಲಿನಿಂದ ತಪ್ಪಿಸಿಕೊಂಡು ದೇಶದ ಅಭಿಮಾನ ಮೆರೆದ ಈ ಯೋಧನ ಸ್ವಾತಂತ್ರ್ಯ ಹೋರಾಟ ಭಾರತೀಯ ಇತಿಹಾಸದಲ್ಲಿ ಒಂದು ಪ್ರಮುಖ ಅಧ್ಯಾಯವೆನಿಸಿದೆ.

ಜಯಪ್ರಕಾಶನಾರಾಯಣ ಅವರಲ್ಲಿ ಸಾಮಾಜಿಕ ನ್ಯಾಯಪರ ಹೋರಾಟದ ಮನೋಭಾವನೆ ಇಲ್ಲದೆ ರಾಜಕೀಯ ಉನ್ನತ ಹುದ್ದೆಯನ್ನು ಪಡೆಯಬೇಕೆಂಬ ಹಂಬಲ ಇದ್ದಿದ್ದರೆ ಅವರ ಹೆಸರು ಇಂದು ಚಾರಿತ್ರಿಕವಾಗಿ ಮಹತ್ವ ಪಡೆಯುತ್ತಿರಲಿಲ್ಲ. ಆದರೆ ಜಯಪ್ರಕಾಶನಾರಾಯಣ ಅವರು ಎಂದೂ ರಾಜಕೀಯ ಅಧಿಕಾರಕ್ಕಾಗಿ ಆಶಿಸಿದವರಲ್ಲ. ಅವರ ಮನಸ್ಸಿನಲ್ಲಿದ್ದುದೆಂದರೆ ಬ್ರಿಟೀಷರ ಆಳ್ವಿಕೆಯಿಂದ ಭಾರತವನ್ನು ಮುಕ್ತಗೊಳಿಸಬೇಕೆಂಬುದೆ ಆಗಿತ್ತು. ಅದಕ್ಕಾಗಿ ಸ್ವಾತಂತ್ರ್ಯ, ಸಮಾನತೆ, ಸೋದರತ್ವ, ಶಾಂತಿ ಮೊದಲಾದ ಈ ತತ್ವಗಳು, 'ಲೋಕನೀತಿಯಿಂದಾಗಿ' ರೂಪುಗೊಳ್ಳಬೇಕೆಂದು 'ಜೆ.ಪಿ.' ಬಯಸಿದ್ದರು. ಅಂತಹ ದೂರದೃಷ್ಟಿತ್ವದ ಚಿಂತನೆಯ ಹರಿಕಾರರಾಗಿದ್ದ ಜಯಪ್ರಕಾಶನಾರಾಯಣ ಅವರು ಭೂದಾನ ಚಳವಳಿಯ ನೇತಾರರಾದ 'ವಿನೋಬಾ'ರ ಹೋರಾಟಕ್ಕೆ ಪೂರಕವಾಗಿ 'ಜೀವದಾನವನ್ನು' ಘೋಷಿಸಿದರು. ಅವರ ಈ ಪ್ರಯತ್ನ ಸ್ತುತ್ಯಾರ್ಹವಾದುದಾಗಿದೆ. ಜಯಪ್ರಕಾಶನಾರಾಯಣ ಅವರು ಕೇವಲ ಒಬ್ಬ ರಾಜಕೀಯ ಹೋರಾಟಗಾರರಷ್ಟೇ ಅಲ್ಲ. ಅಪ್ಪಟ ದೇಶಾಭಿಮಾನಿಯೂ ಕೂಡ ಹೌದು. ಈ ಹೇಳಿಕೆಗೆ ಪೂರಕವಾಗಿ ಯಾವುದಾದರೊಂದು ದೇಶ ಭಾರತದ ಮೇಲೆ ಆಕ್ರಮಣ ಮಾಡುತ್ತಿದ್ದರೆ ಅಂತಹ ಅನೀತಿಯನ್ನು ಪ್ರತಿಭಟಿಸುತ್ತಿದ್ದವರಲ್ಲಿ ಜಯಪ್ರಕಾಶನಾರಾಯಣ ಮೊದಲಿಗರಾಗುತ್ತಿದ್ದರು ಎಂಬುದು ಅರ್ಥಪೂರ್ಣವಾದ ಸಂಗತಿ.

ಜಯಪ್ರಕಾಶನಾರಾಯಣ ಅವರು ಎಷ್ಟೋ ಸಂದರ್ಭಗಳಲ್ಲಿ ವಂಶಪಾರಂಪರ್ಯ ಆಡಳಿತವನ್ನು ಕಟುವಾಗಿ ಟೀಕಿಸುತ್ತಿದ್ದರು. ಅವರು, ಅಂದಿನ ಪ್ರಧಾನಿಗಳಾಗಿದ್ದ ಹಾಗೂ ಶ್ರೀಮತಿ ಇಂದಿರಾಗಾಂಧಿ ಅವರ ಆಡಳಿತದ ವಿರುದ್ಧ ತಿರುಗಿ ಬಿದ್ದಿದ್ದರು. 'ಏವೆರಿ ಮನ್ಸ್' ಪತ್ರಿಕೆಗೆ ಲೇಖನಗಳನ್ನು ಬರೆಯುವ ಮೂಲಕ ನ್ಯಾಯಾಲಯಗಳ ಸ್ವಾತಂತ್ರ್ಯ ಮತ್ತು

ರಾಜಕೀಯ ಭ್ರಷ್ಟಾಚಾರವನ್ನು ಕುರಿತಂತೆ ವಿಶ್ಲೇಷಿಸಿದರು, ಆ ಹಿನ್ನೆಲೆಯಲ್ಲಿ 'ಜಯಪ್ರಕಾಶನಾರಾಯಣ' ಅವರ ನೇತೃತ್ವದಲ್ಲಿ ಫೆಬ್ರುವರಿ 1974ರ ಗುಜರಾತಿನಲ್ಲಿ ಶಾಸನಸಭೆಯನ್ನು ರದ್ದುಗೊಳಿಸುವಂತೆ ಸಾರ್ವಜನಿಕವಾಗಿ ಮುಷ್ಕರ ಚಳವಳಿ ನಡೆದವು. ಇದರಲ್ಲಿ ವಿದ್ಯಾರ್ಥಿಗಳ ಪಾತ್ರ ಮಹತ್ವದ್ದು. ಅಲ್ಲಿಯವರೆಗೆ ಶ್ರೀಮತಿ ಇಂದಿರಾಗಾಂಧಿಯವರ ಆಡಳಿತದ ವಿರುದ್ಧ ಧ್ವನಿ ಎತ್ತಿದವರೆ ವಿರಳ. ಆಗ ಜಯಪ್ರಕಾಶನಾರಾಯಣ ಅವರು ಆಡಿರುವ ಮಾತುಗಳು "ಇಂದಿರಾ ನನಗೆ ಪುತ್ರಿ ಸಮಾನ ವಯಕ್ತಿಕವಾಗಿ ಆಕೆಯ ಮೇಲೆ ನನಗೆ ಕೋಪವಿಲ್ಲ. ಅವಳು ಕ್ರಾಂತಿಯನ್ನು ತಡೆಗಟ್ಟುವುದಾದರೆ, ಜಾಗ ಬಿಡಬೇಕಾಗುತ್ತದೆ"6 ಎಂದಿರುವ ಜಯಪ್ರಕಾಶ ನಾರಾಯಣ್ ಅವರಲ್ಲಿ ಎಂತಹ ಪರಿಸ್ಥಿತಿಯಲ್ಲಿಯೂ ವ್ಯವಸ್ಥೆಯನ್ನು ಎದುರು ಹಾಕಿಕೊಳ್ಳುವಲ್ಲಿ ಕೆಚ್ಚೆದೆ ಎಷ್ಟಿತ್ತೆಂಬುದು ಸ್ಪಷ್ಟವಾಗುತ್ತದೆ. ಭ್ರಷ್ಟ ಸರ್ಕಾರವನ್ನು ವಜಾಗೊಳಿಸಿ, "ಪ್ರಜಾಪ್ರಭುತ್ವ" ಸ್ಥಾಪಿಸುವುದೇ ಮುಖ್ಯ ಉದ್ದೇಶವೆಂದು ಪಾಟ್ನಾ ನಗರದಲ್ಲಿ, ಏಪ್ರಿಲ್ 12, 1973ರಲ್ಲಿ 'ಜೆಪಿ'ಯವರು ಆಡಿದ ಮಾತುಗಳು ಅರ್ಥಪೂರ್ಣವಾದುವುಗಳೇ ಆಗಿವೆ.

ದೀನದಲಿತರು ಶೋಷಿತರ ಬಗ್ಗೆ ಅಪಾರ ಕಾಳಜಿ, ಅನುಕಂಪವನ್ನು ಇಟ್ಟುಕೊಂಡು ಚಿಂತಿಸುತ್ತಿದ್ದ ಜಯಪ್ರಕಾಶನಾರಾಯಣ ಅವರು, ತಾವು ಮೊದಲು ಮೈಗೂಡಿಸಿಕೊಂಡಿದ್ದ ಕಮ್ಯುನಿಸಂ ತತ್ವಸಿದ್ಧಾಂತಗಳಿಂದ ದೂರವಾಗಿ, ಸ್ವಾವಲಂಬನೆ, ಸ್ವರಾಜ್ಯ ಸತ್ಯಾಗ್ರಹ ಎಂಬ ಸರ್ವೋದಯದ ಶಕ್ತಿಗೆ ಎಷ್ಟೊಂದು ಮಹತ್ವವಿದೆ ಎಂಬುದನ್ನು ತೋರಿಸಿದರು. ಆ ಕಾರಣಕ್ಕಾಗಿ ತಮ್ಮ ಕೊನೆಯ ದಿವಸಗಳಲ್ಲಿ ಸರ್ವೋದಯದ ಕಡೆಗೆ ಗಮನ ಹರಿಸಿದ ಜಯಪ್ರಕಾಶನಾರಾಯಣ ಅವರ ವ್ಯಕ್ತಿತ್ವದಲ್ಲಿ ಮಹಾತ್ಮಗಾಂಧೀಜಿಯವರ ಗಾಢಪ್ರಭಾವ ಇರುವುದನ್ನು ಕಾಣಬಹುದಾಗಿದೆ. ಮೊದಮೊದಲು ತಮ್ಮ ವಿಚಾರ, ಚಿಂತನೆಗಳನ್ನು ವಿಸ್ತರಿಸಿಕೊಂಡಿದ್ದು ಕಾರ್ಲ್‌ಮಾರ್ಕ್ಸ್, ಲೆನಿನ್ ಪ್ರತಿಪಾದಿಸಿದ ಚಿಂತನೆಗಳಿಂದಾದರೂ ಸಹ, ಕೊನೆಗೆ ಸರ್ವೋದಯದ ಕಡೆಗೆ ಹೊಸ ದಿಕ್ಕನ್ನು ಬದಲಿಸಿಕೊಂಡು 'ಜೆ.ಪಿ'ಯವರು ಆ ಮೂಲಕವೆ ಗ್ರಾಮೋದ್ಧಾರದ ಅಭ್ಯುದಯವನ್ನು ನಿರೀಕ್ಷಿಸಿದರು. ಆನಂತರ, ಯುವಪೀಳಿಗೆಗೆ ಉತ್ತಮ ಶಿಕ್ಷಣವನ್ನು ನೀಡಿ ಅವರನ್ನು ಪ್ರಜ್ಞಾವಂತರನ್ನಾಗಿಸುವುದು, 'ಜೆಪಿ' ಅವರು ಕಂಡುಕೊಂಡಂತಹ ಪ್ರಮುಖ ವಿಷಯವಾಗಿತ್ತು.

ಹತ್ತಾರು ವರ್ಷಗಳಿಂದ ರಾಜ್ಯಭಾರವನ್ನು ಮಾಡಿಕೊಂಡು ಬರುತ್ತಿದ್ದ ಕಾಂಗ್ರೆಸ್ ಪಕ್ಷದ ವಿರುದ್ಧ ಜನಾಂದೋಲನವನ್ನು ಜೂನ್ 29, 1975 ರಿಂದ ಜಯಪ್ರಕಾಶ ನಾರಾಯಣ ಅವರು ಆರಂಭಿಸಿದರು. ಇದರ ಜೊತೆಗೆ ಜನಸಂಘ, ಸ್ವತಂತ್ರ ಪಕ್ಷ ಆರ್.ಎಸ್.ಎಸ್. ಹಾಗೂ ಕಮ್ಯುನಿಸ್ಟ್ ಮುಂತಾದ ರಾಜಕೀಯ ಪಕ್ಷಗಳನ್ನು ಒಂದುಗೂಡಿಸಿದರು. ನೈತಿಕ ಮೌಲ್ಯಗಳ

ಪುನರುತ್ಥಾನಕ್ಕಾಗಿ ಜನತಾ ಸರ್ಕಾರದ ಪ್ರತಿಷ್ಠಾಪನೆಗಾಗಿ ಮಾಡಿದ ಅಹಿಂಸಾತ್ಮಕ ಆಂದೋಲನ, ಭಾರತದ ರಾಜಕೀಯ ಚರಿತ್ರೆಯಲ್ಲಿ ಮೌಲಿಕವಾದ ಸ್ಥಾನವನ್ನು ಪಡೆದಿದೆ. ಈ ಎಲ್ಲ ರಾಜಕೀಯ ಬೆಳವಣಿಗೆಯಿಂದ 'ಜೆಪಿ' ಅವರ ನೇತೃತ್ವದಲ್ಲಿ ಮೇ 1, 1977ರಂದು ಕಾಂಗ್ರೆಸ್ ಪಕ್ಷದ, ಪರ್ಯಾಯ ಪಕ್ಷವಾಗಿ 'ಜನತಾ ಪಕ್ಷ' ಉದಯವಾಯಿತು. ಈ ಬೆಳವಣಿಗೆ ಭಾರತೀಯ ರಾಜಕಾರಣದಲ್ಲಿ ಐತಿಹಾಸಿಕವಾಗಿ ಮಹತ್ವವನ್ನು ಪಡೆದುಕೊಂಡಿದೆ. ಆ ಹಿನ್ನೆಲೆಯಲ್ಲಿ ಜಯಪ್ರಕಾಶ ನಾರಾಯಣರು "ಸ್ವಾತಂತ್ರ್ಯ ಅಥವಾ ದಾಸ್ಯ ಪ್ರಜಾಪ್ರಭುತ್ವ ಅಥವಾ ಅನುವಂಶಿಕ ಸರ್ವಾಧಿಕಾರ, ಇವುಗಳಲ್ಲಿ ಯಾವುದು ಬೇಕೊ, ಅದನ್ನು ಆರಿಸಿಕೊಳ್ಳಿ. ಇಂದಿನ ಚುನಾವಣೆಗಳ ಗುರಿಯೆ ಇದು" ಎಂದಿದ್ದಾರೆ. ಜಯಪ್ರಕಾಶ ನಾರಾಯಣರ ಈ ಅಭಿಪ್ರಾಯ ಅವರಲ್ಲಿದ್ದ ಸೂಕ್ಷ್ಮ ಚಿಂತನೆಯ, ಪ್ರಗತಿಪರ ಮನಸ್ಸಿನ ಹಾಗೂ ದೂರದೃಷ್ಟಿತ್ವಕ್ಕೆ ಹಿಡಿದ ಕನ್ನಡಿ ಎನ್ನಬಹುದು. ಅಂತಹ ಮಹನೀಯರಾದ ಜೆಪಿಯವರು ಮಾರ್ಚ್ 23, 1979 ರಂದು ಮರಣಹೊಂದಿದರು. ಆದರೆ ಜೆಪಿ ಅವರು ತೀರಿಕೊಂಡು ಸುಮಾರು 3 ದಶಕಗಳಿಗಿಂತಲೂ ಹೆಚ್ಚಿನ ವರ್ಷಗಳನ್ನು ಕಳೆದಿರಬಹುದು. ಆದರೆ, ಅವರು ಪ್ರತಿಪಾದಿಸಿದ ಸಾಮಾಜಿಕ ಮೌಲ್ಯಗಳು, ಇಂದಿಗೂ ಸಹ ಮಹತ್ವವನ್ನು ಪಡೆದಿವೆ. 'ಜೆಪಿ'ಯವರು ಸ್ಥಾಪಿಸಿದ 'ಜನತಾಪಕ್ಷ'ದ ನೆರಳಿನಲ್ಲಿ ಅನೇಕ ಜನರು ಇಂದಿಗೂ ಸಹ ರಾಜಕೀಯ ಸ್ಥಾನಮಾನಗಳನ್ನು ಪಡೆದು ಉನ್ನತ ಹುದ್ದೆಯನ್ನು ಪಡೆದಿರುವುದು ಜೆಪಿಯವರ ವಿಚಾರಚಿಂತನೆಗಳನ್ನು ನೆನಪಿಸುತ್ತವೆ.

ಕೊನೆ ಟಿಪ್ಪಣಿಗಳು

1 ಲೋಹಿಯಾ : ಇವರ ಪೂರ್ವಿಕರು 'ಕಬ್ಬಿಣ'ದ ವ್ಯಾಪಾರವನ್ನು ಮಾಡುತ್ತಿದ್ದುದರ ಹಿನ್ನೆಲೆಯಲ್ಲಿ ಈ ಹೆಸರು ಬಂದಿದೆ ಎನ್ನಲಾಗಿದೆ. (ಸಂಗ್ರಹ: ಸ್ವಾತಂತ್ರ್ಯದ ಅಂತರ್ಜಲ), ಪು.ಸಂ. 239, 1996.

2. ಸಮಾಜವಾದಿ ಲೋಹಿಯಾ ; (ಲೇ) ದೇ.ಜ.ಗೌ, ಪ್ರಕಾಶಕರು : ಕುವೆಂಪು ವಿದ್ಯಾ ಪರಿಷತ್ತು. ಕವಿಶೈಲ, ಜಯಲಕ್ಷ್ಮೀಪುರಂ, ಮೈಸೂರು, ಪು.ಸಂ. 26 - 1989.

3. The Indian Express Delhi, May 31st 1963.

4. ಸಮಾಜವಾದಿ ಲೋಹಿಯಾ : (ಲೇ) ದೇ.ಜ.ಗೌ. ಪ್ರಕಾಶಕರು: ಕುವೆಂಪು ವಿದ್ಯಾ ಪರಿಷತ್ತು, ಕವಿಶೈಲ, ಜಯಲಕ್ಷ್ಮೀಪುರಂ, ಮೈಸೂರು, ಪು.ಸಂ. 39-40.

5. ಸ್ವಾತಂತ್ರ್ಯದ ಅಂತರ್ಜಲ: (ಸಂ) ಪಲ್ಲ‌ವರ. ಕಾಳೇಗೌಡನಾಗವಾರ ಮತ್ತು ಡಾ. ನಟರಾಜ ಹುಳಿಯಾರ್, ಪ್ರಕಾಶಕರು: ವೈ.ಕೆ. ಮುದ್ದುಕೃಷ್ಣ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ

ಇಲಾಖೆ, 14/3ಆ, ನೃಪತುಂಗ ರಸ್ತೆ, ಬೆಂಗಳೂರು, 20, ಪು.ಸಂ. 265, ಮೊದಲ ಮುದ್ರಣ - 1996.

6. ಲೋಕನಾಯಕ: (ಲೇ) ದೇ.ಜ.ಗೌ ಪ್ರಕಾಶಕರು; ಶಿವರಂಜಿನಿ ಪಬ್ಲಿಕೇಷನ್, ಮೈಸೂರು, ಪು.ಸಂ. 27, 1980,